**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್.ಸಿ. ಸಂಖ್ಯೆಃ 1/2020**

**ಫಿರ್ಯಾದಿದಾರರುಃ** : **ಕರ್ನಾಟಕದ ಸರ್ಕಾರ ಪರವಾಗಿ**
**ಗರಗ ಪೋಲಿಸ ಠಾಣೆ**

**ವಿರುದ್ಧ**

**ಆರೋಪಿ ಹೆಸರು** : **ಉಮೇಶ ತಂದೆ ಶಿವಪ್ಪ ರಾಮಣ್ಣವರ**
ವಯಾಃ 25, ಉದ್ಯೋಗಃ ಕೂಲಿ
ಸಾಃ ಹಂಗರಕಿ ತಾಃ **ಧಾರವಾಡ**

**ಕಲಂ 313 ಸಿ.ಆರ್.ಪಿ.ಸಿ. ರಡಿಯಲ್ಲಿ ಆರೋಪಿತನ ಹೇಳಿಕೆಯು**

ಪ್ರಶ್ನೆ 1 : ಈ ಪ್ರಕರಣದಲ್ಲಿ ನುಡಿದಿರುವ ಎಲ್ಲಾ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿಸಿಕೊಂಡಿರುವಿರಾ ?

ಉತ್ತರಃ

ಪ್ರಶ್ನೆ 2 : ಅ.ಸಾ.1 ಕಲ್ಲನಗೌಡ ಪಾಟೀಲ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ15/02/2018 ರಂದು ಎನ್ ಎಲ್ ಎಂ ಎನ್ನುವ ಸ್ಕೀಂ ನಡಿಯಲ್ಲಿ ಪಂಚಾಯತಿ ಕಚೇರಿಯ ತಪಾಸಣೆ ಇದ್ದ ಕಾರಣ ದಿಃ 14/02/2018 ರಂದು ಎಲ್ಲಾ ಕಡತಗಳನ್ನು ಸರಿಯಾಗಿ ಇಟ್ಟುಕೊಳ್ಳುವಂತೆ ತಾನು ಹಂಗರಕಿ ಪಂಚಾಯತಿಯ ಸಿಬ್ಬಂದಿಗಳಿಗೆ ಹೇಳಿದ್ದೆ. ಮೇಲೆ

ಹೇಳಿದ ದಿನ ಬೆಳಿಗ್ಗೆ ಸುಮಾರು 11.00 ಗಂಟೆ ಸಮಯಕ್ಕೆ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದ ಚಾಸಾ.4 ರುದ್ರಪ್ಪ ಮುರಾರಿ ಫೋನ್ ಮಾಡಿ, ಗ್ರಾಮ ಪಂಚಾಯತಿ ದಾಖಲೆಗಳಿಗೆ ಬೆಂಕಿ ಹತ್ತಿರುವುದಾಗಿ ಹೇಳಿದ. ತಾನು ಆತನನ್ನು ಯಾವ ರೀತಿ ಬೆಂಕಿ ಹತ್ತಿತು, ನೀವೇನಾದರೂ ನೋಡಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರು ಆಕಸ್ಮಿಕವಾಗಿ ಬೆಂಕಿ ಹತ್ತಿರಬಹುದು ಎಂದು ಹೇಳಿದರು. ಅದರಂತೆ ತಾನು ಗರಗ ಪೋಲಿಸ್ ಠಾಣೆಗೆ ಹೋಗಿ ನಿಪಿ 1 ರಂತೆ ದೂರು ಕೊಟ್ಟೆ ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 3ಃ ಅ.ಸಾ.1 ತಮ್ಮ ಮುಂದುವರೆದ ಸಾಕ್ಷದಲ್ಲಿ ತಾನು ಕಚೇರಿಗೆ ಬಂದ ನಂತರ ತಮ್ಮ ಕಚೇರಿಯ ಸಿಬ್ಬಂದಿಗಳನ್ನು ಮತ್ತು ಪಂಚಾಯತಿಯ ಸದಸ್ಯರನ್ನು ವಿಚಾರಣೆ ಮಾಡಿದೆ. ದಿಃ 15/02/2018 ರಂದು ಮುಂಜಾನೆ 10.45 ಗಂಟೆಗೆ ಗ್ರಾಮ ಪಂಚಾಯತಿ ಕಚೇರಿಯ ಒಳಗೆ ಬಂದು, ಕಚೇರಿಯಲ್ಲಿದ್ದ ಹಣಕಾಸಿಗೆ ಸಂಬಂಧಪಟ್ಟ ದಾಖಲೆಗಳನ್ನು, ಎನ್.ಆರ್.ಇ.ಜಿ.ಫೈಲ್‌ಗಳು, ಎಸ್.ಬಿ.ಎಂ. ಫೈಲ್‌ಗಳು, ಗ್ರಾಮ ಪಂಚಾಯತಿಯ ನಡಾವಳಿಗಳು ಮತ್ತು ಓಚರ್ ಗಳನ್ನು ಗ್ರಾಮ ಪಂಚಾಯತಿಯ ಬಾಗಿಲಿನಿಂದ ಹೊರಗೆ ತಂದು ಹಾಕಿ, ಅವುಗಳಿಗೆ ಬೆಂಕಿ ಹಚ್ಚಿದ್ದಾಗಿ ತಿಳಿದುಬಂತು. ಬೆಂಕಿ ಹಚ್ಚಿದ ನಂತರ ಅಲ್ಲಿಂದ ನೀನು ಆರೋಪಿ ಓಡಿ ಹೋಗಿದ್ದಾನೆ ಎಂದು ಗೊತ್ತಾಯಿತು ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 4ಃ ಅ.ಸಾ.1 ತಮ್ಮ ಮುಂದುವರೆದ ಸಾಕ್ಷದಲ್ಲಿ ಬೆಂಕಿ ಹತ್ತಿರುವುದನ್ನು ನೋಡಿ ಸಿಬ್ಬಂದಿಗಳೆಲ್ಲ ಮತ್ತು ಗ್ರಾಮಸ್ಥರು ಸೇರಿ ಬೆಂಕಿಯನ್ನು ಆರಿಸಿದ್ದಾರೆ. ಬೆಂಕಿಯಿಂದಾಗಿ ಕೆಲವು ಕಡತಗಳು ಸಂಪೂರ್ಣ ಸುಟ್ಟು ಹೋಗಿದ್ದು, ಇನ್ನೂ ಕೆಲವು ಕಡತಗಳು

ಭಾಗಶಃ ಸುಟ್ಟಿದ್ದವು. ಯಾವುದೋ ಒಂದು ಉದ್ದೇಶದಿಂದ ನೀನು ಆರೋಪಿ ಕಡತಗಳಿಗೆ ಬೆಂಕಿ ಹಚ್ಚಿ ಸುಟ್ಟಿದ್ದಾನೆ ಎಂದು ಗೊತ್ತಾಯಿತು. ಆನಂತರ ತಾನು ದಿ: 01/03/2018 ರಂದು ಗರಗ ಪೋಲಿಸ್ ಠಾಣೆಗೆ ಹೋಗಿ ನಿಪಿ 2 ರಂತೆ ದೂರು ಕೊಟ್ಟೆ ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 5ಃ ಅ.ಸಾ.1 ತಮ್ಮ ಮುಂದುವರೆದ ಸಾಕ್ಷದಲ್ಲಿ ದಿಃ 16/02/2018 ರಂದು ಪೊಲೀಸರು ಜಾಗಕ್ಕೆ ಬಂದು ಪಂಚನಾಮೆ ಮಾಡಿದ್ದಾರೆ. ಭಾಗಶಃ ಸುಟ್ಟುಹೋದ ಕಡತಗಳನ್ನು ಮತ್ತು ರಜಿಸ್ಟರ್ ಗಳನ್ನು ಪೊಲೀಸರು ಆ ಸಮಯದಲ್ಲಿ ಅಮಾನತ್ತುಪಡಿಸಿಕೊಂಡಿದ್ದಾರೆ. ಒಂದು ಡಬ್ಬಿಯಲ್ಲಿ ಭಾಗಶಃ ಸುಟ್ಟು ನಾಶವಾದ ಕೆಲವು ದಾಖಲೆಗಳು ಮತ್ತು ಫೈಲ್ಗಳು ಇದ್ದು, ಅವುಗಳು ಮುಮಾ.1 ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 6ಃ ಅ.ಸಾ.2 ರುದ್ರಪ್ಪ ಮುರಾರಿ ಅ.ಸಾ.3 ರಾಮಕೃಷ್ಣ ಬಡಿಗೇರ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 15/02/2018 ರಂದು ಗ್ರಾಮ ಪಂಚಾಯತಿ ಕಚೇರಿಯ ಅಡಿಟ್ ಇತ್ತು. ಅಡಿಟ್‌ಗೆ ವ್ಯವಸ್ಥೆ ಮಾಡಲು ತಾನು ಕಚೇರಿಗೆ ಬೇಗ ಹೋಗಿದ್ದೆ. ಕಚೇರಿಯಲ್ಲಿದ್ದ ಫೈಲ್ ಗಳನ್ನು ಹೊಂದಾಣಿಕೆ ಮಾಡಿ ಇಟ್ಟೆವು. ತಾವು ಚಹಾ ಕುಡಿದು ವಾಪಸ ಕಚೇರಿಗೆ ಬರುವಾಗ ತಮ್ಮ ಕಚೇರಿಯ ಫೈಲ್ ಗಳಿಗೆ ಮತ್ತು ದಾಖಲಾತಿಗಳಿಗೆ ಬೆಂಕಿ ಹಚ್ಚಿದ್ದರು ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 7ಃ ಅ.ಸಾ.2 ಮತ್ತು 3 ತಮ್ಮ ಮುಂದುವರೆದ ಸಾಕ್ಷದಲ್ಲಿ ಸದರಿ ದಾಖಲಾತಿಗಳಿಗೆ ಮತ್ತು ಫೈಲ್ ಗಳಿಗೆ ಪಂಚಾಯತಿ ಕಚೇರಿಯ ಹೊರಗೆ ಬೆಂಕಿ ಹಚ್ಚಿದ್ದರು. ಅಲ್ಲಿದ್ದ ಸಾರ್ವಜನಿಕರು ಆರೋಪಿ ದಾಖಲಾತಿಗಳಿಗೆ ಬೆಂಕಿ ಹಚ್ಚಿದ್ದಾನೆ ಎಂದು ಹೇಳಿದರು ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 8 ಅ.ಸಾ.2 ತಮ್ಮ ಮುಂದುವರೆದ ಸಾಕ್ಷದಲ್ಲಿ ಕಚೇರಿಯಲ್ಲಿದ್ದ ಎನ್.ಆರ್.ಇ.ಜಿ.ಫೈಲ್‌ಗಳು, 14ನೇ ಹಣಕಾಸು ವರ್ಷದ ಫೈಲ್ ಗಳು, ಸಾದಿಲ್ವಾರ್ ಬಿಲ್‌ಗಳು, ಎಸ್.ಬಿ.ಎಂ. ಶೌಚಾಲಯ ಫೈಲ್‌ಗಳು, ಕಚೇರಿಯ ನಡಾವಳಿಗಳು ಮತ್ತು ಬಸವ ವಸತಿ ಯೋಜನೆ ಫೈಲ್ ಗಳು ಮತ್ತು ಇತರ ಫೈಲ್ ಗಳಲ್ಲಿ ಕೆಲವು ಸಂಪೂರ್ಣ ಸುಟ್ಟಿದ್ದು, ಇನ್ನೂ ಕೆಲವು ಭಾಗಶಃ ಸುಟ್ಟಿದ್ದವು ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 9 ಅ.ಸಾ. 2 ಮತ್ತು 3 ತಮ್ಮ ಮುಂದುವರೆದ ಸಾಕ್ಷದಲ್ಲಿ ಮರುದಿನ ಮದ್ಯಾಹ್ನ 12.00 ಗಂಟೆಗೆ ಪೊಲೀಸರು ಕಚೇರಿಗೆ ಬಂದು ಪಂಚಾಯದಸ್ತ ಮಾಡಿ ಅಮಾನತ್ತುಪಡಿಸಿ ತೆಗೆದುಕೊಂಡು ಹೋಗಿದ್ದಾರೆ. ಭಾಗಶಃ ಸುಟ್ಟು ಹೋದ ದಾಖಲೆಗಳನ್ನು ಮು.ಮಾ 1 ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 10 ಅ.ಸಾ.8 ಮಂಜುನಾಥ ಅಮ್ಮಿನಭಾವಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 15/02/2018 ರಂದು ತಾನು ಗರಗ ಪೋಲಿಸ್ ಠಾಣೆಯ ಠಾಣಾಧಿಕಾರಿಯ ಪ್ರಭಾರದಲ್ಲಿದ್ದೆ, ಆ ದಿನ ರಾತ್ರಿ 10.00 ಗಂಟೆಗೆ ಹಂಗರಕಿ ಗ್ರಾಮ ಪಂಚಾಯಿತಿಯ ಪಿಡಿಓ., ರವರು

ಲಿಖಿತವಾಗಿ ನಿಪಿ 1 ರಂತೆ ದೂರನ್ನು ಕೊಟ್ಟಿದ್ದರು. ಸದರಿ ದೂರನ್ನು ಆ್ಯಕ್ಸಿಡೆಂಟಲ್ ಫಾಯರ್ 1/2018 ರಲ್ಲಿ ದಾಖಲ್ ಮಾಡಿದ್ದೇನೆ ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 11 ಅ.ಸಾ.8 ತಮ್ಮ ಮುಂದುವರೆದ ಸಾಕ್ಷದಲ್ಲಿ ದಿಃ 16/02/2018 ರಂದು ಹಂಗರಕಿ ಗ್ರಾಮ ಪಂಚಾಯಿತಿಗೆ ಭೇಟಿ ಕೊಟ್ಟೆ. ಇಬ್ಬರು ಪಂಚರಾದ ಚಾಸಾ.2 ಮತ್ತು 3 ಇವರನ್ನು ಬರಮಾಡಿಕೊಂಡೆ, ಪ್ರಾಸಾ.2 ರುದ್ರಪ್ಪ ಶಿವಪ್ಪ ಮುರಾರಿ ಇವರು ಘಟನಾ ಸ್ಥಳ ತೋರಿಸಿದ, ಸುಟ್ಟ ಫೈಲ್‌ಗಳು ಇದ್ದ ಒಂದು ಡಬ್ಬಿಯನ್ನು ತೋರಿಸಿದರು. ಅದರಲ್ಲಿ ಅರ್ಧ ಮರ್ಧ ಸುಟ್ಟ ಫೈಲ್ ಗಳು ಇದ್ದವು. ಅವುಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಂಡೆ. ಸ್ಥಳದಲ್ಲಿ ಪಂಚರ ಸಮಕ್ಷಮ ನಿಪಿ 9 ರಂತೆ ಪಂಚನಾಮೆಯನ್ನು ಬರೆದೆ. ಅವುಗಳನ್ನು ತೆಗೆದುಕೊಂಡು ಠಾಣೆಗೆ ಮರಳಿ ಸ್ವತ್ತುಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. ಸದರಿ ಅರೆಸುಟ್ಟ ಫೈಲುಗಳನ್ನು ಮುಮಾ.1 ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 12 ಅ.ಸಾ.8 ತಮ್ಮ ಮುಂದುವರೆದ ಸಾಕ್ಷದಲ್ಲಿ ದಿಃ 01/03/2018 ರಂದು ತಾನು ಠಾಣೆಯಲ್ಲಿದ್ದಾಗ ಹಂಗರಕಿ ಗ್ರಾಮ ಪಂಚಾಯಿತಿ ಪಿಡಿಓ., ನಿಪಿ 2 ರಂತೆ ಲಿಖಿತ ಪಿರ್ಯಾದಿಯನ್ನು ಕೊಟ್ಟರು. ಅದನ್ನು ತಮ್ಮ ಠಾಣೆಯ ಪ್ರಕರಣ ಸಂ.46/18 ರಲ್ಲಿ ದಾಖಲಿಸಿಕೊಂಡೆ. ನಿಪಿ 10 ರಂತೆ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹೆಚ್ ಸಿ ನಂ.703 ಇವರ ಮುಖಾಂತರ ಕಳುಹಿಸಿಕೊಟ್ಟಿದ್ದೇನೆ.

ಮುಂದಿನ ತನಿಖೆಯ ಬಗ್ಗೆ ಕಡತವನ್ನು ಠಾಣೆಯ ಪಿ ಎಸ್ ಐ., ಚಾಸಾ.15 ಇವರಿಗೆ ಕೊಟ್ಟಿದ್ದೇನೆ ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 13 ಅ.ಸಾ.11 ಸಂಗಪ್ಪ ಪಾಲಭಾವಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 02/03/2018 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ.8 ಎಂ ಎಸ್ ಅಮ್ಮಿನಭಾವಿ ಇವರಿಂದ ಪಡೆದುಕೊಂಡೆ. ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿ, ದಿಃ 02/03/2018 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟೆ. ಸ್ಥಳದಲ್ಲಿ ಸಾಕ್ಷಿದಾರರಾದ ಫ್ರಾಸಾ.2, 3, 4, 6 ಮತ್ತು 10 ರವರ ಹೇಳಿಕೆಗಳನ್ನು ಪಡೆದುಕೊಂಡೆ. ನಂತರ ಆರೋಪಿಯ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿದೆ ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 14 ಅ.ಸಾ.11 ತಮ್ಮ ಮುಂದುವರೆದ ಸಾಕ್ಷದಲ್ಲಿ ಠಾಣಾ ಪಿಸಿ ನಂ.713 ಇವರು ದಿಃ 05/03/2018 ರಂದು ಈ ಪ್ರಕರಣದ ಆರೋಪಿಯನ್ನು ಠಾಣೆಗೆ ತಂದು ಹಾಜರಪಡಿಸಿದರು. ತಾನು ಆರೋಪಿಯನ್ನು ವಿಚಾರಣೆ ಮಾಡಿದೆ. ಆತ ಕೃತ್ಯ ಮಾಡಿರುವುದನ್ನು ಒಪ್ಪಿಕೊಂಡ. ಆತನನ್ನು ದಸ್ತಗಿರಿ ಮಾಡಿದೆ. ಸೂಕ್ತ ಜಾಮೀನನ್ನು ಪಡೆದು ಠಾಣೆಯಲ್ಲಿ ಬಿಡುಗಡೆ ಮಾಡಿದೆ ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 15 ಅ.ಸಾ.11 ತಮ್ಮ ಮುಂದುವರೆದ ಸಾಕ್ಷದಲ್ಲಿ ಕೃತ್ಯ ನಡೆದ ಸ್ಥಳ ಪಂಚಾಯಿತಿ ಆಫೀಸ್ ಎನ್ನುವ ಬಗ್ಗೆ ಪಿಡಿಓ., ಹಂಗರಕಿ ಪಂಚಾಯಿತಿಯವರು ನಿಪಿ 12 ರಂತೆ

ದಾಖಲೆಯನ್ನು ಹಾಜರಪಡಿಸಿದರು. ದಿಃ 08/03/2018 ರಂದು ಚಾಸಾ.10 ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡೆ. ದಿಃ 02/03/2018 ರಂದು ಪ್ರಾಸಾ.7 ಈತನ ಹೇಳಿಕೆಯನ್ನು ಪಡೆದುಕೊಂಡೆ ಎಂದು ನುಡಿದಿದ್ದಾರೆ. ಇದಕ್ಕೆ ತಮ್ಮ ಸಮಜಾಯಿಷಿ ಏನು ?

ಉತ್ತರಃ

ಪ್ರಶ್ನೆ 16: ನೀವು ನ್ಯಾಯಾಲಯದಲ್ಲಿ ಇನ್ನೇನಾದರೂ ಹೆಚ್ಚಿನದು ಹೇಳುವುದು ಇದೆಯಾ ಅಥವಾ ದಾಖಲೆಗಳನ್ನು ಹಾಜರು ಮಾಡುವಿರಾ ?

ಉತ್ತರಃ

ಪ್ರಶ್ನೆ 17: - ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುವುದಿದೆಯಾ ?

ಉತ್ತರಃ

(ಮೇಲ್ಕಾಣಿಸಿದ ಆರೋಪಿಗೆ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ವಿವರಿಸಿ, ಆರೋಪಿಯು ನೀಡಿದ ಉತ್ತರಗಳನ್ನು ಯಥಾವತ್ತಾಗಿ ಪಡೆದುಕೊಳ್ಳಲಾಗಿದೆ ಎಂದು ದೃಡೀಕರಿಸುತ್ತೇನೆ).

ಓ. ಹೇ. ಕೇ. ಸರಿ ಇದೆ.

ದಿನಾಂಕಃ

**(ಉಮೇಶ ಎಂ ಅಡಿಗ)**
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.

ಆರೋಪಿ ಸಹಿ